# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1988 |
| ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾಗಿದ ದಿನಾಂಕ | : | 24-03-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಕುಡಿಯುವ ನೀರಿನ ಪೂರೈಕೆ ಯಾವ ರೀತಿ ಮಾಡಲಾಗುತ್ತಿದೆ ;</td><td>ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಪ್ರದೇಶಗಳಿಗೆ 24x7 ನಿರಂತರ ನೀರು ಸರಬರಾಜನ್ನು ವಿಸ್ತರಿಸಲು ವಿಶ್ವಬ್ಯಾಂಕ್ ನೆರವಿನಡಿ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆಯಲ್ಲಿ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ, ವರ್ಗಾವಣೆ (DBOT) ಮಾದರಿಯಲ್ಲಿ ಮೆ|| ಎಲ್ & ಟಿ ಲಿಮಿಟೆಡ್ ಚೆನ್ನೈ ರವರಿಗೆ ಜೂನ್-2020 ರಂದು ಗುತ್ತಿಗೆ ನೀಡಲಾಗಿರುತ್ತದೆ. ಕಾರ್ಯಾಚರಣೆ ಮತ್ತು ನಿರ್ವಹಣೆಯು ಸದರಿ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.<br><br>ರೇಣುಕ ಸಾಗರ ಜಲಾಶಯದಿಂದ ಸರಬರಾಜಾಗುವ ನೀರನ್ನು ಅಮ್ಮಿನ ಭಾವಿಯಲ್ಲಿರುವ ಜಲ ಶುದ್ಧೀಕರಣ ಘಟಕ ಮತ್ತು ನೀರಸಾಗರ ಜಲಾಶಯದಿಂದ ಸರಬರಾಜಾಗುವ ನೀರನ್ನು ಕಣವಿ ಹೊನ್ನಪುರದಲ್ಲಿರುವ ಜಲ ಶುದ್ಧೀಕರಣ ಘಟಕಗಳಲ್ಲಿ ಶುದ್ಧೀಕರಿಸಿ, ನಂತರ ಕ್ಲೋರಿನ್ ಬೆರೆಸಿ ಕೊಳವೆ ಮುಖಾಂತರ ಬಳಕೆದಾರರಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ ಹಾಗೂ 1931 ಸಂಖ್ಯೆಯ ಕೊಳವೆ ಬಾವಿಗಳಿಂದ ಸಹ ನೀರನ್ನು ವಿತರಣಾ ಜಾಲದ ಮೂಲಕ ಹುಬ್ಬಳ್ಳಿ-ಧಾರವಾಡ ನಗರದ ಸಾರ್ವಜನಿಕರಿಗೆ ನೀಡಲಾಗುತ್ತಿದೆ.</td></tr>
<tr><td>ಆ)</td><td>ಸದರಿ ನಗರಗಳಿಗೆ ಒಂದು ವರ್ಷಕ್ಕೆ ಎಷ್ಟು ನೀರು ಬೇಕಾಗುತ್ತದೆ.</td><td>ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಪ್ರದೇಶಗಳಿಗೆ 24x7 ನಿರಂತರ ನೀರು ಸರಬರಾಜು ಮಾಡಲು ಒಂದು ವರ್ಷಕ್ಕೆ 3.06 TMC ನೀರು ಬೇಕಾಗುತ್ತದೆ.</td></tr>
<tr><td>ಇ)</td><td>ಅವಳಿ ನಗರಗಳ ಎಲ್ಲಾ ವಾರ್ಡ್‌ಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲಾಗುತ್ತಿದೆಯೇ ;</td><td>ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಲಭ್ಯವಿರುವ ನೀರಿನಲ್ಲಿ ಹಾಗೂ ಪ್ರಸ್ತುತ ಇರುವ ಮೂಲಭೂತ ಸೌಕರ್ಯದ ವ್ಯವಸ್ಥೆಯಿಂದ ನೀರು ಸರಬರಾಜು ಮಾಡಲಾಗುತ್ತಿರುವ ವಿವರ ಈ ಕೆಳಗಿನಂತಿದೆ.<br><table><tr><th>ಹುಬ್ಬಳ್ಳಿ-ಧಾರವಾಡ : 82 ವಾರ್ಡ್</th><th>ಪ್ರಸ್ತುತ ಸರಬರಾಜು ಆಗುತ್ತಿರುವ ವಿವರ</th></tr><tr><td>11 ವಾರ್ಡ್‌ಗಳಲ್ಲಿ</td><td>24x7 ನಿರಂತರ ನೀರು ಸರಬರಾಜು</td></tr></table></td></tr>
</table>

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th>ಹುಬ್ಬಳ್ಳಿ-ಧಾರವಾಡ : 82 ವಾರ್ಡ್</th><th colspan="2">ಪ್ರಸ್ತುತ ಸರಬರಾಜು ಆಗುತ್ತಿರುವ ವಿವರ</th></tr>
<tr><td>25 ವಾರ್ಡ್‌ಗಳಲ್ಲಿ</td><td colspan="2">ಪ್ರತಿದಿನ (4 ರಿಂದ 18 ಘಂಟೆ) ನೀರು ಪೂರೈಕೆ ಮಾಡಲಾಗುತ್ತಿದೆ.</td></tr>
<tr><td rowspan="4">46 ವಾರ್ಡ್‌ಗಳಲ್ಲಿ</td><td>2 ವಾರ್ಡ್ ಗಳಿಗೆ :</td><td>3 ದಿನಗಳಿಗೊಮ್ಮೆ</td></tr>
<tr><td>4 ವಾರ್ಡ್ ಗಳಿಗೆ :</td><td>4 ದಿನಗಳಿಗೊಮ್ಮೆ</td></tr>
<tr><td>11 ವಾರ್ಡ್ ಗಳಿಗೆ :</td><td>5 ದಿನಗಳಿಗೊಮ್ಮೆ</td></tr>
<tr><td>30 ವಾರ್ಡ್‌ಗಳಿಗೆ :</td><td>6 ದಿನಗಳಿಗೊಮ್ಮೆ</td></tr>
</table>
<br>ನೀರು ಪೂರೈಕೆಯಲ್ಲಿ ಕೊರತೆಯುಂಟಾದಾಗ ಮತ್ತು ವ್ಯತ್ಯಯವಾದಲ್ಲಿ ಸದರಿ ಸ್ಥಳಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಪ್ರಸ್ತುತವಿರುವ ಒಟ್ಟು 1931 ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿಡಲಾಗಿದ್ದು, ಕೊಳವೆ ಬಾವಿಗಳಿಂದಲೂ ನೀರು ಸರಬರಾಜು ಮಾಡಲಾಗುತ್ತಿದೆ. ಕೊಳವೆಗಳ ಮುಖಾಂತರ ನೀರು ಸರಬರಾಜು ಆಗದ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.</td></tr>
<tr><td>ಈ)</td><td>ಹಾಗೂ ಅವಳಿ ನಗರಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲು ಪೈಪ್‌ಲೈನ್ ಮಾಡುವಾಗ ಸರಿಯಾಗಿ ಮುಚ್ಚದೆ ರಸ್ತೆಗಳು ಹದಗೆಟ್ಟಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ?</td><td>ಬಂದಿರುತ್ತದೆ.<br>ಮೆ|| ಎಲ್ & ಟಿ ಲಿಮಿಟೆಡ್ ಕಂಪನಿಯಿಂದ 24x7 ನಿರಂತರ ನೀರು ಸರಬರಾಜು ಕಾಮಗಾರಿಯಡಿ ಬರುವ ಪೈಪ್‌ಲೈನ್ ಅಳವಡಿಸಿದ ನಂತರ ಕತ್ತರಿಸಿರುವ ರಸ್ತೆಯನ್ನು ಕಂಪನಿಯವರ ಕರಾರಿನಂತೆ ಪುನರ್ ನಿರ್ಮಾಣ ಮಾಡಬೇಕಾಗಿರುತ್ತದೆ.<br><br>ಕತ್ತರಿಸಿರುವ ರಸ್ತೆಯನ್ನು ಕರಾರಿನಂತೆ ಮೂಲ ಸ್ವರೂಪಕ್ಕೆ ಪುನರ್‌ನಿರ್ಮಾಣ ಮಾಡದ ರಸ್ತೆಗಳನ್ನು ಗುರುತಿಸಿ, ಈಗಾಗಲೇ ಗುತ್ತಿಗೆದಾರರಿಗೆ ಕರಾರಿನಂತೆ ಪುನರ್ ನಿರ್ಮಾಣ ಮಾಡಲು ಸೂಚನೆಗಳನ್ನು ನೀಡಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಕ್ರಮಕೈಗೊಳ್ಳಲಾಗುತ್ತಿದೆ.</td></tr>
</table>

ಕಡತ ಸಂಖ್ಯೆ:ನಅಇ 55 ಪಿಆರ್‌ಜೆ 2026

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು